**3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 4069/2023**

**ದಿನಾಂಕಃ 22.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಅವಿನಾಶ್ | ಚಾಸಾ-4, ಪ್ರಾ.ಸ.-3 |
| ತಂದೆಯ  ಹೆಸರು  ಃ | ಲಿಂಗಪ್ಪ | |
| ವಯಸ್ಸು  ಃ | 36 ವರ್ಷ | |
| ಉದ್ಯೋಗ  ಃ | ಕೂಲಿ | |
| ವಾಸ  ಃ | ಅಜ್ಜಂಪುರ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-3 ನನಗೆ ಗೊತ್ತು.  ಚಾಸಾ-2 ನನಗೆ ಗೊತ್ತಿಲ್ಲ.  ಮೃತ ವ್ಯಕ್ತಿ ನನಗೆ ಗೊತ್ತು.   ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇರುವುದಿಲ್ಲ.  ಮೃತ ವ್ಯಕ್ತಿಗೆ ಅಪಘಾತವಾಗಿರುವ ವಿಚಾರ ನನಗೆ ಗೊತ್ತಿಲ್ಲ.   ಸಾಕ್ಷಿ ನಿಪಿ-13 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು.   ಸಾಕ್ಷಿ ನಿಪಿ-9 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು.   ಎರಡು ಸಹಿಗಳನ್ನು ಒಂದು ವರ್ಷದ ಹಿಂದೆ ಅಶೋಕ್ ರವರಿಗೆ ಅಪಘಾತವಾದ ವಿಚಾರವಾಗಿ ಹಾಕಿರುತ್ತೇನೆ.  ಪೋಲಿಸರು ನನ್ನನ್ನು ಮತ್ತು ಚಾಸಾ-3 ರವರನ್ನು ಮಹಜರ್ ಗೆ ಸಹಕರಿಸುವಂತೆ ಕೋರಿ ಸಹಿ ಮಾಡಿಸಿಕೊಂಡಿರುತ್ತಾರೆ.   ಪೋಲಿಸರ ಕೋರಿಕೆ ಮೇರೆಗೆ ನಾನು ಮತ್ತು ಚಾಸಾ-3 ರವರು ಘಟನಾ ಸ್ಥಳಕ್ಕೆ ಹೋಗಿದ್ದು, ಅಲ್ಲಿ ರಕ್ತ ಇದ್ದ ಸ್ಥಳದಲ್ಲಿ ಮಹಜರ್ ಜರುಗಿಸಿರುತ್ತಾರೆ. ನಮ್ಮ ಜೊತೆ ಬೇರೆ ಪೋಲಿಸರು ಇದ್ದರು.   ಮಹಜರನ್ನು ಮಧ್ಯಾಹ್ನ 2.00 ರಿಂದ 3.00 ಗಂಟೆ ಸಮಯದಲ್ಲಿ ಮಾಡಿರುತ್ತಾರೆ.   ನನ್ನ ಜೊತೆ ಚಾಸಾ-3 ರವರು ಸಹಿ ಮಾಡಿರುತ್ತಾರೆ.   ಮಹಜರ್ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆಸಿರುತ್ತಾರೆ.  ಸಾಕ್ಷಿ ನಿಪಿ-10 ರಿಂದ 12 ರ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ  ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು  ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 18.08.2023 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಆರೋಪಿಯು ತನ್ನ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಅಶೋಕ್ ರವರು ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಅವರು ತೀವ್ರಗಾಯವಾಗಿ ಮೃತಪಟ್ಟಿರುತ್ತಾರೆ ಎಂದರೆ ಸರಿ.   ಈ ವಿಚಾರವಾಗಿ ಚಾಸಾ-1 ರವರು ದೂರು ನೀಡಿದ್ದು ದೂರಿಗೆ ಸಂಬಂಧಿಸಿದಂತೆ ಸ್ಥಳ ಮಹಜರ್ ಗೆ ಸಹಕರಿಸುವಂತೆ ನನಗೆ

ಮತ್ತು ಚಾಸಾ-3 ರವರಿಗೆ ನಿಪಿ-13 ರಂತೆ ಪೋಲಿಸರು ನೋಟಿಸು ನೀಡಿ ಕೋರಿಕೊಂಡಿರುತ್ತಾರೆ ಎಂದರೆ ಸರಿ. ದಿಃ 20.08.2023 ರಂದು ನಾನು ಮತ್ತು ಚಾಸಾ-3 ರವರು ಘಟನಾ ಸ್ಥಳಕ್ಕೆ ಹೋಗಿದ್ದು ಅಲ್ಲಿ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 12.30 ರಿಂದ 1.30 ರವರೆಗೆ ಸ್ಥಳ ಮಹಜರನ್ನು ನಿಪಿ-9 ರಂತೆ ಜರುಗಿಸಿರುತ್ತಾರೆ ಎಂದರೆ ಸರಿ. ಸ್ಥಳ ಮಹಜರ್ ಸಮಯದಲ್ಲಿ ನಿಪಿ-10 ರಿಂದ 12 ರ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ ಎಂದರೆ ಸರಿ.

**<u>ಪಾಟೀಸವಾಲುಃ ಶ್ರೀ ಸಿ ಜೆ .ಎಂ. ಆರೋಪಿ ಪರ ವಕೀಲರಿಂದಃ</u>**

ನಿಪಿ-13 ರ ನೋಟಿಸು ಹಾಗೂ ನಿಪಿ-9 ರ ಮಹಜರ್ ಗೆ ಏಕ ಕಾಲದಲ್ಲಿ ನನ್ನ ಬಳಿ ಪೋಲಿಸರು ಸಹಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ಮತ್ತು ಮೃತ ವ್ಯಕ್ತಿಯು ಒಂದೇ ಊರಿನವರು ಮತ್ತು ಸ್ನೇಹಿತರು ಎಂದರೆ ಸರಿ. ನಿಪಿ-9 ರ ಮಹಜರ್ ನಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ತಿಳಿದಿಲ್ಲ ಎಂದರೆ ಸರಿ. ನಿಪಿ-9 ರ ಮಹಜರ್ ಗೆ ಯಾರು ಮತ್ತು ಎಷ್ಟು ಜನ ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ತಿಳಿದಿಲ್ಲ ಎಂದರೆ ಸರಿ. ಅಪಘಾತದ ವಿಚಾರವು ನನಗೆ ಪೋಲಿಸರು ತಿಳಿಸಿರುವ ಕಾರಣ ತಿಳಿಯಿತು. ನಿಪಿ-10 ರ ಛಾಯಾಚಿತ್ರವು ಸರ್ವಿಸ್ ರಸ್ತೆಯಲ್ಲಿ ತೆಗೆದಿರುತ್ತಾರೆ ಎಂದರೆ ಸರಿ. ನಿಪಿ-10 ರಲ್ಲಿ ನಾವು ಬೀರೂರು ಕಡೆ ಮುಖ ಮಾಡಿ ನಿಂತಿರುತ್ತೇವೆ ಎಂದರೆ ಸರಿ. ನಿಪಿ-11 ರಲ್ಲಿರುವ ರಕ್ತದ ಕಲೆಯು ಬೀರೂರು ಕಡೆಯಿಂದ ಬರುವಾಗ ರಸ್ತೆಯ ಎಡಬದಿಯ ಅಂಚಿನಲ್ಲಿ ಇದೆ ಎಂದರೆ ಸರಿ. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಮೃತ ವ್ಯಕ್ತಿಯು ಸ್ನೇಹಿತನಾದ ಕಾರಣ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.